# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1246 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಪ್ರಸ್ತುತ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಸಣ್ಣ ಕೈಗಾರಿಕೆಯಲ್ಲಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; ಈ ಯೋಜನೆಗಳಲ್ಲಿ ಬಡತನ ರೇಖೆಗಿಂತ ಕೆಳಗಿನವರಿಗಾಗಿ ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ; (ಮಾಹಿತಿ ನೀಡುವುದು) | ಪ್ರಸ್ತುತ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ:<br><br>ಅ) 2023-24ರ ಆಯವ್ಯಯ ಭಾಷಣದ ಕಂಡಿಕೆ-262ರಲ್ಲಿ **"ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ರಾಜ್ಯದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (KSSIDC) ವತಿಯಿಂದ ಹುಬ್ಬಳ್ಳಿ, ಕಲಬುರಗಿಯ ಚಿತ್ತಾಪುರ, ಉತ್ತರ ಕನ್ನಡದ ಕೋಡ್ಕಣಿ, ಬೆಳಗಾವಿಯ ಕಣಗಲಾ, ಚಾಮರಾಜನಗರದ ಬದನಗುಪ್ಪೆ, ವಿಜಯಪುರದ ಇಂಡಿ ಮತ್ತು ಯಾದಗಿರಿಯ ಶಹಪೂರ ಹೀಗೆ ಏಳು ಸ್ಥಳಗಳಲ್ಲಿ ಹೊಸದಾಗಿ ಕೈಗಾರಿಕಾ ವಸಾಹತುಗಳನ್ನು ಹಂತ ಹಂತವಾಗಿ ಸ್ಥಾಪಿಸಲಾಗುವುದು."** ಎಂದು ಘೋಷಿಸಲಾಗಿರುತ್ತದೆ. ಸದರಿ ಘೋಷಣೆಯನ್ವಯ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಕೆಳಕಂಡ 7 ಸ್ಥಳಗಳಲ್ಲಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ:<br><br><table><tr><th>ಕ್ರ. ಸಂ</th><th>ಕೈಗಾರಿಕಾ ವಸಾಹತು</th></tr><tr><td>1</td><td>ಕೋಡ್ಕಣಿ-ಸಿರಸಿ-ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ.</td></tr><tr><td>2</td><td>ಕೆಲ್ಲಂಬಳ್ಳಿ ಗ್ರಾಮ, ಬದನಗುಪ್ಪೆ, ಚಾಮರಾಜನಗರ ಜಿಲ್ಲೆ.</td></tr><tr><td>3</td><td>ಕಣಗಲಾ, ಬೆಳಗಾವಿ ಜಿಲ್ಲೆ.</td></tr><tr><td>4</td><td>ಇಂಡಿ, ವಿಜಯಪುರ ಜಿಲ್ಲೆ.</td></tr><tr><td>5</td><td>ಚಿತ್ತಾಪುರ 2ನೇ ಹಂತ, ಗುಲ್ಬರ್ಗಾ ಜಿಲ್ಲೆ.</td></tr><tr><td>6</td><td>ಹುಬ್ಬಳ್ಳಿ</td></tr><tr><td>7</td><td>ಯಾದಗಿರಿ, ಶಹಾಪುರ.</td></tr></table><br>ಆ) 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-320 ರಲ್ಲಿ **"ವಿವಿಧ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವ ಕೈಗಾರಿಕಾ ವಸಾಹತುಗಳನ್ನು ಕೇಂದ್ರ ಸರ್ಕಾರದ ಸಹಯೋಗದಲ್ಲಿ 39 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕರ್ನಾಟಕ ರಾಜ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ನಿಗಮದ (KSSIDC) ಮೂಲಕ ಮೇಲ್ದರ್ಜೆಗೇರಿಸಲಾಗುವುದು"** ಎಂದು ಘೋಷಿಸಲಾಗಿರುತ್ತದೆ.<br><br>ಅದರಂತೆ, ಮೇಲ್ಕಂಡ ಯೋಜನೆಗಳನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸಲು ಅನುಮೋದನೆ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>ಮುಂದುವರೆದು, ರಾಜ್ಯದ ನಿರುದ್ಯೋಗಿ ಯುವಕ |

ಯುವತಿಯವರಿಗೆ ಸಣ್ಣ ಕೈಗಾರಿಕೆ ಸ್ಥಾಪಿಸಲು ಕೇಂದ್ರ ಸರ್ಕಾರದ ವತಿಯಿಂದ ಪಿಎಂಇಜಿಪಿ ಯೋಜನೆಯನ್ನು ಅನುಷ್ಠಾನ ಮಾಡಲಾಗಿದೆ.

**ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆ (ಪಿಎಂಇಜಿಪಿ):**

- 2008-09ನೇ ಸಾಲಿನಿಂದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಟಿ ಕಾರ್ಯಕ್ರಮವನ್ನು (PMEGP) ಜಾರಿಗೊಳಿಸಲಾಗುತ್ತಿದೆ. ಸ್ಥಳೀಯ ಸಂಪನ್ಮೂಲಗಳ ಆಧಾರದ ಮೇಲೆ ಉತ್ಪಾದನೆ ಮತ್ತು ಸೇವಾ ವಲಯಗಳ ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಉದ್ಯೋಗವನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿದೆ.
- ಈ ಯೋಜನೆಯಡಿ ವಿವಿಧ ಬ್ಯಾಂಕ್‌ಗಳ ಮೂಲಕ ಉತ್ಪಾದನಾ ವಲಯಕ್ಕೆ ರೂ.50.00 ಲಕ್ಷ ಮತ್ತು ಸೇವಾ ವಲಯಕ್ಕೆ ರೂ. 20.00 ಲಕ್ಷದವರೆಗೆ ಸಾಲವನ್ನು ವಿಸ್ತರಿಸಲಾಗಿದೆ. ಯೋಜನೆಯಡಿಯಲ್ಲಿ ಲಭ್ಯವಿರುವ ಮಾರ್ಜಿನ್ ಹಣದ ವಿವರಗಳು ಕೆಳಕಂಡಂತಿವೆ:

| **ವರ್ಗ** | **ಅಂಚು ಹಣ** | |
|---|---|---|
| | **ನಗರ** | **ಗ್ರಾಮೀಣ** |
| ಸಾಮಾನ್ಯ ವರ್ಗದವರಿಗೆ | 15% | 25% |
| ಪ.ಜಾ, ಪ.ಪಂ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಮಾಜಿ ಸೈನಿಕ, ಅಂಗವಿಕಲ, ಮಹಿಳೆ | 25% | 35% |

ರಾಜ್ಯದಲ್ಲಿ ಸಮಗ್ರ ಕೈಗಾರಿಕಾ ಅಭಿವೃದ್ಧಿಗಾಗಿ ಸರ್ಕಾರವು ದಿನಾಂಕ: 08.02.2025 ರಂದು ಕೈಗಾರಿಕಾ ನೀತಿ 2025-30ನ್ನು ಜಾರಿಗೆ ತಂದಿರುತ್ತದೆ. ಸದರಿ ನೀತಿಯಡಿ ಈ ಕೆಳಕಂಡಂತೆ ವಿವಿಧ ರೀತಿಯ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡಿ ಕೈಗಾರಿಕೆಗಳನ್ನು ಉತ್ತೇಜಿಸಲಾಗುತ್ತಿದೆ:

1. ಬಂಡವಾಳ ಹೂಡಿಕೆ ಸಹಾಯಧನ / ವಹಿವಾಟು ಆಧಾರಿತ ಹೂಡಿಕೆ ಸಹಾಯಧನ.
2. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ವಿನಾಯಿತಿ.
3. ಭೂ ಪರಿವರ್ತನಾ ಶುಲ್ಕ ಮರುಪಾವತಿ.
4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ.
5. ವಿದ್ಯುತ್ ಚ್ಛಕ್ತಿ ಸಹಾಯಧನ.
6. ಕೈಗಾರಿಕಾ ವಸತಿ ನಿಲಯ ಸಹಾಯಧನ
7. ತಂತ್ರಜ್ಞಾನ ಅಳವಡಿಕೆ & ನವೋನ್ವೇಶಣೆ ಉತ್ತೇಜನ
8. ರಫ್ತು ಘಟಕಗಳಿಗೆ ಪ್ರೋತ್ಸಾಹ.
9. ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀರಣ ಉತ್ತೇಜನ
10. ಲಾಜಿಸ್ಟಿಕ್ಸ್ ಮತ್ತು ಉಗ್ರಾಣ ಸಹಾಯಧನ

| | | |
|---|---|---|
| | | ಈ ಮೇಲಿನ ಯೋಜನೆಗಳು ಎಲ್ಲಾ ವರ್ಗದವರಿಗೂ ಅನ್ವಯಿಸುತ್ತದೆ |
| ಆ) | ರಾಜ್ಯದಲ್ಲಿ ಕೈಗಾರಿಕೆ ನಿವೇಶನ ಮಂಜೂರಾದ ಎಷ್ಟು ಫಲಾನುಭವಿಗಳು ಹಣ ತುಂಬಿರುವುದಿಲ್ಲ; ಹಣ ತುಂಬದಿರುವವರ ಹಂಚಿಕೆಯನ್ನು ರದ್ದುಪಡಿಸಿ ನಿಯಮಾನುಸಾರ ಬೇರೆಯವರಿಗೆ ಹಂಚಿಕೆ ಮಾಡಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಮಂಜೂರಾದ ಒಟ್ಟು 128 ನಿವೇಶನಗಳ ಹಂಚಿಕೆದಾರರು ಹಣ ತುಂಬಿರುವುದಿಲ್ಲ. ಹಣ ತುಂಬದೆ ಇರುವ ಫಲಾನುಭವಿಗಳ ಹಂಚಿಕೆಯನ್ನು ರದ್ದುಪಡಿಸಿ ನಿಯಮಾನುಸಾರ ಬೇರೆ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ. |
| ಇ) | ವಿಜಯಪುರ ಜಿಲ್ಲೆಯಲ್ಲಿ ಎಷ್ಟು ಹೊಸ ಯೋಜನೆಗಳು ಜಾರಿಗೆ ಬಂದಿವೆ; ಸ್ವಂತ ಉದ್ದಿಮೆ ಹೊಂದಲು ಮುಂದೆ ಬರುವ ನಿರುದ್ಯೋಗಿ ಪದವೀಧರರುಗಳನ್ನು ಉತ್ತೇಜಿಸಲು ಯಾವ ಹೊಸ ಯೋಜನೆ ಹಾಕಿಕೊಳ್ಳಲು ಸರ್ಕಾರ ನಿರ್ಧರಿಸಿದೆ; (ಸಂಪೂರ್ಣ ಮಾಹಿತಿ ನೀಡುವುದು) | 2023-24ನೇ ಸಾಲಿನ ಆಯವ್ಯಯ ಘೋಷಣೆಯಂತೆ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಹೋಬಳಿಯ ಬೂದಿಹಾಳ ಗ್ರಾಮದಲ್ಲಿ 19.38 ಎಕರೆ ಜಮೀನಿನಲ್ಲಿ ಹೊಸದಾಗಿ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.<br><br>ವಿಜಯಪುರ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಕೈಗಾರಿಕಾ ನೀತಿ 2014-19 ಮತ್ತು 2020-25 ರಡಿ ಒಟ್ಟು 85 ಘಟಕಗಳಿಗೆ ಬಂಡವಾಳ ಹೂಡಿಕೆ ಸಹಾಯಧನ ಮಂಜೂರು ಮಾಡಲಾಗಿದೆ. ನಿರುದ್ಯೋಗಿ ಪಧವೀದರರುಗಳು ಸ್ವಂತ ಉದ್ದಿಮೆ ಹೊಂದಲು ಮುಂದೆ ಬರುವವರನ್ನು ಉತ್ತೇಜಿಸಲು ಸರ್ಕಾರವು ಕೈಗಾರಿಕಾ ನೀತಿ 2025-30ನ್ನು ಜಾರಿಗೊಳಿಸಿರುತ್ತದೆ.<br><br>ಭಾರತ ಸರ್ಕಾರದ ಪ್ರಧಾನಮಂತ್ರಿ ಉದ್ಯೋಗ ಸೃಜನಾ ಯೋಜನೆಯಡಿ ಸ್ವಯಂ-ಉದ್ಯೋಗ ಕಂಡುಕೊಳ್ಳಲು ಯುವಜನತೆಗೆ ಕೈಗಾರಿಕಾ ಘಟಕ ಸ್ಥಾಪಿಸಲು ಗರಿಷ್ಟ ರೂ.50 ಲಕ್ಷದವರೆಗೆ ಮತ್ತು ಸೇವಾ ಘಟಕ ಸ್ಥಾಪಿಸಲು ಯೋಜನಾ ವೆಚ್ಚ ಗರಿಷ್ಟ ರೂ.20 ಲಕ್ಷದವರೆಗಿನ ಪ್ರಸ್ತಾವನೆಗಳಿಗೆ ಹಣಕಾಸು ಸಂಸ್ಥೆಗಳ ಮೂಲಕ ಸಾಲ ಸೌಲಭ್ಯ ಒದಗಿಸಲಾಗುತ್ತದೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗರಿಷ್ಟ ಶೇ.35 ರವರೆಗೆ ಮತ್ತು ನಗರ ಪ್ರದೇಶಗಳಲ್ಲಿ ಗರಿಷ್ಟ ಶೇ.25 ರವರೆಗೆ ಸಹಾಯಧನ ನೀಡಲಾಗುತ್ತದೆ. |
| ಈ) | ಸಮೃದ್ಧಿ ಕರ್ನಾಟಕ ನಿರ್ಮಿಸಲು ಸಣ್ಣ ಕೈಗಾರಿಕೆ ಇಲಾಖೆಯ ಪಾತ್ರಗಳೇನು; (ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಇಲಾಖೆಯು ಹೊಸ ಕೈಗಾರಿಕಾ ನೀತಿ 2025-30ನ್ನು ಜಾರಿಗೆ ತಂದಿರುತ್ತದೆ. ಇದರಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹೆಚ್ಚಿನ ಉತ್ತೇಜನ ಮತ್ತು ರಿಯಾಯಿತಿಗಳನ್ನು ಕಲ್ಪಿಸಲಾಗಿದೆ. **ವಿವರಗಳನ್ನು ಅನುಬಂಧ-1 ರಲ್ಲಿ** ಒದಗಿಸಲಾಗಿದೆ. |

ಸಿಐ 54 ಸಿಎಸ್‌ಸಿ 2025

**(ಶರಣಬಸಪ್ಪ ದರ್ಶನಾಪೂರ)**

ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.

ಅನುಬಂಧ-1

# ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
## ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ವಿಭಾಗ

### ಅ. ಕೈಗಾರಿಕಾ ನೀತಿ 2025–30

ಕರ್ನಾಟಕ ಸರ್ಕಾರವು 08.02.2025 ರಿಂದ ಹೊಸ ಕೈಗಾರಿಕಾ ನೀತಿ 2025–30 ನ್ನು ಜಾರಿಗೆ ತಂದಿದ್ದು ಇದರಡಿಯಲ್ಲಿ ಹೊಸ ಕೈಗಾರಿಕಾ ಘಟಕ ಸ್ಥಾಪಿಸುವ, ಹಾಲಿ ಇರುವ ಕೈಗಾರಿಕೆಯ ವಿಸ್ತರಣೆಗಾಗಿ/ ಆಧುನೀಕರಣಕ್ಕಾಗಿ/ ವೈವಿಧ್ಯೀಕರಣಕ್ಕಾಗಿ ಬಂಡವಾಳ ಹೂಡುವ ಎಂ.ಎಸ್.ಎಂ.ಇ ಗಳಿಗೆ ಈ ಕೆಳಗಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳು ದೊರೆಯುತ್ತವೆ.

| | ಸಾಮಾನ್ಯ ಪ್ರವರ್ಗ | | | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕರು. | | |
|---|---|---|---|---|---|---|
| **1. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ** | | | | | | |
| | **ವಲಯ–1** | **ವಲಯ–2** | **ವಲಯ–3** | **ವಲಯ–1** | **ವಲಯ–2** | **ವಲಯ–3** |
| **ಸೂಕ್ಷ್ಮ ಕೈಗಾರಿಕೆಗಳು** | 30% ವಿ.ಎಫ್.ಎ (ಗರಿಷ್ಟ ರೂ.30ಲಕ್ಷ) | 25% ವಿ.ಎಫ್.ಎ (ಗರಿಷ್ಟ ರೂ.25 ಲಕ್ಷ) | 10% ವಿ.ಎಫ್.ಎ (ಗರಿಷ್ಟ ರೂ.10ಲಕ್ಷ) (ಕೇವಲ ಬೆಂಗಳೂರು ಗ್ರಾಮಾಂತರ) | 35% ವಿ.ಎಫ್.ಎ (ಗರಿಷ್ಟ ರೂ.35ಲಕ್ಷ) | 30% ವಿ.ಎಫ್.ಎ (ಗರಿಷ್ಟ ರೂ.30ಲಕ್ಷ) | 15% ವಿ.ಎಫ್.ಎ (ಗರಿಷ್ಟ ರೂ.15 ಲಕ್ಷ) (ಕೇವಲ ಬೆಂಗಳೂರು ಗ್ರಾಮಾಂತರ) |
| **ಸಣ್ಣ ಕೈಗಾರಿಕೆಗಳು** | 25% ವಿ.ಎಫ್.ಎ (ಗರಿಷ್ಟ ರೂ.200ಲಕ್ಷ) | 20% ವಿ.ಎಫ್.ಎ (ಗರಿಷ್ಟ ರೂ.150ಲಕ್ಷ) | 10% ವಿ.ಎಫ್.ಎ (ಗರಿಷ್ಟ ರೂ.50ಲಕ್ಷ) (ಕೇವಲ ಬೆಂಗಳೂರು ಗ್ರಾಮಾಂತರ) | 30% ವಿ.ಎಫ್.ಎ (ಗರಿಷ್ಟ ರೂ.225ಲಕ್ಷ) | 25% ವಿ.ಎಫ್.ಎ (ಗರಿಷ್ಟ ರೂ.175ಲಕ್ಷ) | 15% ವಿ.ಎಫ್.ಎ (ಗರಿಷ್ಟ ರೂ.75 ಲಕ್ಷ) |

**ಟಿಪ್ಪಣಿ: ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನವನ್ನು ಎರಡು ಕಂತಿನಲ್ಲಿ ಬಿಡುಗಡೆ ಮಾಡಲಾಗುವುದು.**
ವಿ.ಎಫ್.ಎ: ವ್ಯಾಲು ಆಫ ಫಿಕ್ಸಡ ಅಸೆಟ್ಸ

**ಮಧ್ಯಮ ಕೈಗಾರಿಕೆಗಳು : ಹೂಡಿಕೆ ಉತ್ತೇಜನಾ ಸಹಾಯಧನದ ಕುರಿತು ಎರಡು ಆಯ್ಕೆಗಳನ್ನು ಕಲ್ಪಿಸಲಾಗಿರುತ್ತದೆ.**

| **ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ** | | **ಮಧ್ಯಮ ಕೈಗಾರಿಕೆಗಳಿಗೆ ಉತ್ಪಾದನಾ ಲಿಂಕ್ಡ ಸಹಾಯಧನ** |
|---|---|---|
| ಹೂಡಿಕೆ ಉತ್ತೇಜನಾ ಸಹಾಯಧನವು ಘಟಕವು ಉತ್ಪಾದನೆ ಪ್ರಾರಂಭಿಸಿದ ನಂತರ 4 ಸಮ ಕಂತುಗಳಲ್ಲಿ ಬಿಡುಗಡೆ ಮಾಡಲಾಗವುದು | | ಘಟಕದ ಉತ್ಪಾದನೆಯ ಆಧಾರದಲ್ಲಿ ಗರಿಷ್ಟ 7 ವರ್ಷ |
| **ವಲಯ–1** | 25% ವಿ.ಎಫ್.ಎ (ಗರಿಷ್ಟ ರೂ.10 ಕೋಟಿ) | 2.5% ನಿವ್ವಳ ಉತ್ಪಾದನೆ (ಗರಿಷ್ಟ ಶೇ.60 ವಿ.ಎಫ್.ಎ) |
| **ವಲಯ–2** | 20% ವಿ.ಎಫ್.ಎ (ಗರಿಷ್ಟ ರೂ.8 ಕೋಟಿ) | 2.0% ನಿವ್ವಳ ಉತ್ಪಾದನೆ (ಗರಿಷ್ಟ ಶೇ.60 ವಿ.ಎಫ್.ಎ) |
| **ವಲಯ–3** | 10% ವಿ.ಎಫ್.ಎ (ಗರಿಷ್ಟ ರೂ.4 ಕೋಟಿ) (ಕೇವಲ ಬೆಂಗಳೂರು ಗ್ರಾಮಾಂತರ) | 1.0% ನಿವ್ವಳ ಉತ್ಪಾದನೆ (ಗರಿಷ್ಟ ಶೇ.30 ವಿ.ಎಫ್.ಎ) (ಕೇವಲ ಬೆಂಗಳೂರು ಗ್ರಾಮಾಂತರ) |

**ಟಿಪ್ಪಣಿ:**
**ಡಾ: ನಂಜುಂಡಪ್ಪ ವರದಿಯ ಅನ್ವಯ ಹೆಚ್ಚುವರಿ ಉತ್ತೇಜನಾ ಸಹಾಯಧನವನ್ನು ಈ ಕೆಳಕಂಡಂತೆ ಕಲ್ಪಿಸಲಾಗಿದೆ.**

| | | |
|---|---|---|
| **ಸೂಕ್ಷ್ಮ ಕೈಗಾರಿಕೆಗಳು** | ಅತ್ಯಂತ ಹಿಂದುಳಿದ ತಾಲ್ಲುಕು | 5% ವಿ.ಎಫ್.ಎ (ಗರಿಷ್ಟ ರೂ.5ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಟ ರೂ.3ಲಕ್ಷ) |
| **ಸಣ್ಣ ಕೈಗಾರಿಕೆಗಳು** | ಅತ್ಯಂತ ಹಿಂದುಳಿದ ತಾಲ್ಲುಕು | 5% ವಿ.ಎಫ್.ಎ (ಗರಿಷ್ಟ ರೂ.10ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಟ ರೂ.5ಲಕ್ಷ) |
| **ಮದ್ಯಮ ಕೈಗಾರಿಕೆಗಳು** | ಅತ್ಯಂತ ಹಿಂದುಳಿದ ತಾಲ್ಲುಕು | 5% ವಿ.ಎಫ್.ಎ (ಗರಿಷ್ಟ ರೂ.50ಲಕ್ಷ) |
| | ಹಿಂದುಳಿದ ತಾಲ್ಲೂಕು | 3% ವಿ.ಎಫ್.ಎ (ಗರಿಷ್ಟ ರೂ.25ಲಕ್ಷ) |
| **ಮದ್ಯಮ ಕೈಗಾರಿಕೆಗಳು (ಉತ್ಪಾದನಾ ಆಧಾರಿತ)** | ಅತ್ಯಂತ ಹಿಂದುಳಿದ ತಾಲ್ಲುಕು | ಗರಿಷ್ಟ 5% ವಿ.ಎಫ್.ಎ |
| | ಹಿಂದುಳಿದ ತಾಲ್ಲೂಕು | ಗರಿಷ್ಟ 3% ವಿ.ಎಫ್.ಎ |

ಬಂಡವಾಳ ಹೂಡಿಕೆ ಸಹಾಯಧನವನ್ನು ಉದ್ಯಮಶೀಲರು ಹೂಡುವ ನಿವೇಶನ, ಕಟ್ಟಡ, ಯಂತ್ರೋಪಕರಣ ಇವುಗಳನ್ನು ಸ್ಥಿರಾಸ್ಥಿ (ವಿ.ಎಫ್.ಎ) ಎಂದು ಪರಿಗಣಿಸಿ ಇದರ ಶೇಕಡವಾರು ನೀಡಲಾಗುವುದು.

**2. ಎಂಎಸ್ಎಂಇಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:**

ಅರ್ಹತೆ
1. ರಾಜ್ಯ ಹಣಕಾಸು ನಿಗಮ.
2. ರಾಷ್ಟಮಟ್ಟದ ಹಣಕಾಸು ಸಂಸ್ಥೆಗಳು,
3. ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು,
4. ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ,
5. ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್).
6. ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ.
7. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ
ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.

ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು
1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ.
2. ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ.
3. ಕಿಯಾನಿಕ್ಸ್,
4. ಕೈಗಾರಿಕಾ ಸಹಕಾರ ಸಂಘಗಳು.
5. ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು.
6. ಆಹಾರ ಪಾರ್ಕ್‌ಗಳು.
7. ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು ಕ್ರಯ ಪತ್ರ, ಉಪ–ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಲಾಗುತ್ತದೆ.

| ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕರು. |
|---|---|
| **2.ಅ ಎಂಎಸ್ಎಂಇಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ** | |
| ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| **ದುಡಿಮೆ ಬಂಡವಾಳಕ್ಕೆ ಸ್ಟ್ಯಾಂಪ ಶುಲವನ್ನು ಉತ್ಪಾದನೆ ಪ್ರಾರಂಭಿಸಿದೆ 3 ವರ್ಷಗಳಲ್ಲಿ ಮಾತ್ರ ಕಲ್ಪಿಸಲಾಗಿದೆ.** | |
| **2.ಆ ಎಂಎಸ್ಎಂಇಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ:** | |
| ವಲಯ1, ವಲಯ 2 : ರೂ.1000/–ಕ್ಕೆ ರೂ.1/–<br>ವಲಯ 3 : ಇಲ್ಲ | ಎಲ್ಲಾ ವಲಯಗಳಿಗೆ :ರೂ.1000/–ಕ್ಕೆ ರೂ.1/– |
| *3.* **ಎಂಎಸ್ಎಂಇಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ** | |
| ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| 4. **ಎಂಎಸ್ಎಂಇಗಳಿಗೆ ವಿದ್ಯುತ್ಶುಲ್ಕದ ಮೇಲಿನ ತೆರಿಗೆ ವಿನಾಯಿತಿ** | |
| ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| 5. **ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ಚ್ಛಕ್ತಿ ಸಬ್ಸಿಡಿ** | |
| **ವಲಯ 1 ಮತ್ತು 2ಕ್ಕೆ ಮಾತ್ರ:** ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/–ರಂತೆ 3 ವರ್ಷಗಳ ಅವಧಿ ವರೆಗೆ ವಿದ್ಯುತ್ಚ್ಛಕ್ತಿ ಸಬ್ಸಿಡಿ. | |
| 6. **ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ** | |
| **ಎಲ್ಲಾ ವಲಯಗಳಿಗೆ**<br>ಐಎಸ್ಒ ಸರಣಿ ಪ್ರಮಾಣೀಕರಣ<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)<br>ಎಫ್.ಎಸ್.ಎಸ್.ಎ.ಐ– ಅಗಮಾರ್ಕ<br>ಎಕೋಮಾರ್ಕ<br>ಝಿರೊ ಡಿಫೇಕ್ಟ ಝಿರೋ ಎಫೆಕ್ಟ (ಝೆಡ್)<br>ಐ.ಎಸ್.ಐ<br>ಫ್ರೂಟ್ ಪ್ರಾಡಕ್ಟ್ಸ ಆರ್ಡರ (ಎಫ.ಪಿ.ಒ)<br>ಬ್ಯೂರೋ ಆಫ ಎನರ್ಜಿ ಎಫೀಸಿಯೆನ್ಸಿ (ಬಿ.ಇ.ಇ)<br>ಯಾವುದೇ ಅಂತರಾಷ್ಟ್ರೀಯ ಕ್ವಾಲಿಟಿ ಸರ್ಟಿಫಿಕೇಷನ್ ಭಾರತ ದೇಶ ಅಂಗಿಕರಿಸಿ ಸರ್ಟಿಫಿಕೇನ್ ಗಳು | ಒಟ್ಟು ಅರ್ಜಿಯ ಮೊತ್ತದ ಶೇ 50 ( ಗರಿಷ್ಟ ಮೋತ್ರ ರೂ.5.00ಲಕ್ಷ ಪ್ರತಿ ಅರ್ಜಿಗೆ) |